ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ ಸಿ  3708-2022

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

**ಸಾಕ್ಷಿಗೆ ದಿಃ 17.12.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ.Y.R.H ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗ ವಿಧ್ಯಾಭ್ಯಾಸ ಮಾಡಿರುತ್ತೇನೆ. ಯಾವುದಾದರೂ ಗಲಾಟೆ ಆದಲ್ಲಿ ಮತ್ತು ಹೊಡೆದಾಟ ಆದಲ್ಲಿ ಪೊಲಿಸರಿಗೆ ದೂರನ್ನು ನೀಡಬೇಕು ಎಂದು ನನಗೆ ಗೊತ್ತು. ಚಾಸಾ 3 ಅವರು ಡಿಗ್ರಿ ವಿಧ್ಯಾಭ್ಯಾಸ ಆಗಿರುತ್ತದೆ. ಅವರಿಗೂ ಗಲಾಟೆ ಆದಲ್ಲಿ ಮತ್ತು ಹೊಡೆದಾಟ ಆದಲ್ಲಿ ತಕ್ಷಣ ಪೊಲಿಸರಿಗೆ ದೂರನ್ನು  ನೀಡಬೇಕು ಎಂದು ನನಗೆ ಗೊತ್ತು. ನಾನಾಗಲಿ ಚಾಸಾ 3 ಅವರು ಆಗಲಿ ಗಲಾಟೆ ಆದ ತಕ್ಷಣ ದೂರನ್ನು ನೀಡಿರುವುದಿಲ್ಲ. ಎಸ್.ಪಿ ಅವರು ಸಹಿ ಮಾಡಿ ಕೊಟ್ಟಿರುವ ದೂರನ್ನು ಹೊರತು ಪಡಿಸಿ ಬೇರೆ ದೂರನ್ನು ನೀಡಿರುವುದಿಲ್ಲವೆಂದರೆ ಸಾಕ್ಷಿ ಎಸ್.ಪಿ ಅವರು ಸಹಿ ಮಾಡಿ ಕೊಟ್ಟ ದೂರನ್ನು ಪಡೆದು ಇನ್ನೊಂದು ದೂರನ್ನು ಬರೆಸಿಕೊಂಡಿರುತ್ತಾರೆಂದು ಹೇಳುತ್ತಾರೆ. ದಿಃ 03.04.2022 ರಂದು ನಾನು ಎಸ್.ಪಿ ಅವರಿಗೆ ದೂರನ್ನು ನೀಡಿರುತ್ತೇನೆ. ಎಸ್.ಪಿ ಅವರು ಸಹಿ ಮಾಡಿದ ದೂರನ್ನು ಪೊಲಿಸರು ಹಾಜರುಪಡಿಸಿರುವುದಿಲ್ಲ. ಎಸ್.ಪಿ ಅವರು ಸಹಿ ಮಾಡಿದ ದೂರ ನಿ.ಪಿ 1 ಆಗಿರುವುದಿಲ್ಲ.

ದೂರಿನಲ್ಲಿ ಮನೆಯ ಖಾತಾ  ನಂ ಮತ್ತು ವಿಸ್ತಿರ್ಣ ಬರೆದಿರುವುದಿಲ್ಲ. ಅದೇ ರೀತಿ ದೂರಿನಲ್ಲಿ ಆರೋಪಿತರ ಮನೆಯ ಖಾತಾ ನಂ ಮತ್ತು ಮನೆಯ ವಿಸ್ತೀರ್ಣ ಬರೆದಿರುವುದಿಲ್ಲ. 2 ಸ್ವತ್ತುಗಳಿಗೆ ಸಂಬಂದಿಸಿದಂತೆ ಸಿವಿಲ್ ವ್ಯಾಜ್ಯ ನಡೆದ ಬಗ್ಗೆ ಸದರಿ ದೂರಿನಲ್ಲಿ ಬರೆದಿರುತ್ತೇನೆ. ದೂರನ್ನು ನೀಡುವ ಸಮಯದಲ್ಲಿ ನ್ಯಾಯಾಲಯದಲ್ಲಿ ಆದ ಆದೇಶದ  ಪ್ರತಿ, 2 ಸ್ವತ್ತುಗಳಿಗೆ ಸಂಬಂಧಿಸಿದ ದಾಖಲೆ ಮತ್ತು ಅಳತೆಗೆ ಸಂಬಂಧಿಸಿದ

ದಾಖಲೆಗಳನ್ನು ನೀಡಿರುವುದಿಲ್ಲವೆಂದರೆ ಸರಿಯಲ್ಲ. ದಿಃ 17.02.2022 ರಂದು ಗಲಾಟೆ ಆದ ಕಾರಣ ಆರೋಪಿತರೂ ನನ್ನ ವಿರುದ್ಧ ದೂರನ್ನು ನೀಡಿದ್ದು ಆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದರೆ ಸರಿ. ಸದರಿ ಪ್ರಕರಣ ಇದೇ ದಿನ ನ್ಯಾಯಾಲಯದಲ್ಲಿ ಇರುತ್ತದೆ ಎಂದರೆ ಸರಿ.

ದಿಃ 18.02.2022 ರಂದು ಪೋಲಿಸ ಠಾಣೆಯಿಂದ ಮರಳಿ ಮನೆಗೆ 9 ಗಂಟೆಗೆ ಬಂದಿರುತ್ತೇನೆ. ನನಗೆ ಚಾಸಾ 3 ಅವರ ಕರೆ ಮಾಡಿರುತ್ತಾರೆ. ನಾನು ಗಲಾಟೆಯನ್ನು ಖುದ್ದಾಗಿ ನೋಡಿರುವುದಿಲ್ಲ. ಗಲಾಟೆ ಆಗಿದೆ ಎನ್ನುವ ದಿನ ಪೋಲಿಸರು ಸ್ಥಳಕ್ಕೆ ಬಂದಿದ್ದು ನಾನು ಸ್ಥಳದಲ್ಲಿ ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ. ಗಲಾಟೆ ಆಗಿದೆ ಎನ್ನುವ ಸಮಯದಲ್ಲಿ ಉಪಯೋಗಿಸಿದ ಮು.ಮಾ. ಗಳನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಚಾಸಾ 3 ಅವರು ಹೇಳಿದ್ದನ್ನು ಹೊರತುಪಡಿಸಿ ನನಗೆ ಗಲಾಟೆಯ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ. ಗಲಾಟೆಯ ಜಾಗ ಮತ್ತು ಚಕ್ಕುಬಂದಿ ನನಗೆ ಗೊತ್ತಿದೆ. ನಾನು ಗಲಾಟೆಯಾದ ಜಾಗ ಮತ್ತು ಚಕ್ಕುಬಂದಿ ಕುರಿತು ನನ್ನ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

ನಾನು ದೂರು ನೀಡುವ ಮೊದಲು ದಿಃ 17.02.2022 ರಂದು ಆದ ಘಟನೆ ಕುರಿತು ಆರೋಪಿತರು ದೂರು ನೀಡಿದ್ದರು ಎಂದರೆ ಸರಿ. ಸದರಿ ದೂರಿನ ಸಂಬಂಧ ಪೋಲಿಸರು ನನಗೆ ಕರೆ ಮಾಡಿ ಕರೆಸಿದ್ದರು ಎಂದರೆ ಸರಿ. ಆರೋಪಿತರು ನೀಡಿದ ದೂರಿಗೆ ಪ್ರತಿಯಾಗಿ ಚಾಸಾ 3 ಅವರ ಹೇಳಿಕೆ ಮೇರೆಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಗಲಾಟೆ ಆಗಿದೆ ಎನ್ನುವ ಸ್ಥಳದ ಸುತ್ತಮುತ್ತ 10 ರಿಂದ 12 ಮನೆಗಳು ಇರುತ್ತವೆ. ಸಾಮಾನ್ಯವಾಗಿ ಗಲಾಟೆ ಆದಾಗ ಎಲ್ಲರಿಗೂ ಗೊತ್ತಾಗುತ್ತದೆ ಎಂದರೆ ಸರಿ. ಅಕ್ಕ ಪಕ್ಕದವರು ಗಲಾಟೆ ಆದ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಹೇಳಿದ ದಿನ ಯಾವುದೇ ಗಲಾಟೆ ಆಗಿರುವುದಿಲ್ಲ ಆರೋಪಿತರೂ ನಮ್ಮ ವಿರುದ್ಧ ದೂರನ್ನು ನೀಡಿದ್ದು ಸದರಿ ಪ್ರಕರಣದಲ್ಲಿ ರಾಜಿ ಮಾಡಿಕೊಳ್ಳಲಿ ಎನ್ನುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು 15 ದಿನಗಳ ನಂತರ ತಡವಾಗಿ ದೂರು ನೀಡಿರುತ್ತೇನೆ ಎಂದರೆ ಸಾಕ್ಷಿ ದೂರನ್ನು ಪಡೆದಿರುವುದಿಲ್ಲ ಎಸ್.ಪಿ ಕಚೇರಿಗೆ ಹೋಗಿ ಬಂದ ನಂತರ ದೂರು ಪಡೆದಿರುತ್ತಾರೆಂದು ಹೇಳುತ್ತಾರೆ. ಹು.ದುರ್ಗದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಅಲ್ಲಿ ಯಾವಾಗಲೂ ವೈದ್ಯರು ಇರುತ್ತಾರೆ ಎಂದರೆ ಸರಿ. ಹು.ದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲವೆಂದರೆ ಸರಿಯಲ್ಲ. ನಾನು ಹು.ದುರ್ಗ ಆಸ್ಪತ್ರೆಗೆ ಹೋಗಿಲ್ಲ ಈ ಬಗ್ಗೆ ಯಾವುದೇ ದಾಖಲೆಯನ್ನು ಪೋಲಿಸರಿಗೆ ನೀಡಿಲ್ಲವೆಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದೇ ಇರುವ ಕಾರಣ ಹು.ದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಮತ್ತು ಕೇಸಗೆ ಅನುಕೂಲವಾಗುವಂತೆ ಗಾಯದ ಪ್ರಮಾಣ ಪತ್ರವನ್ನು ಮದ್ದೂರು ಆಸ್ಪತ್ರೆಯಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ದೂರಿನಲ್ಲಿ ಹೇಳಿರುವಂತೆ ಆರೋಪಿತರೂ ಚಾಸಾ 2 ಅವರ ಮೇಲೆ ದೊಣ್ಣೆಯಿಂದ ಹೊಡೆದಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸ್ಥಳಕ್ಕೆ 108 ಅಂಬ್ಯೂಲೇನ್ಸ್ ಬಂದಿಲ್ಲ ಮತ್ತು ಸ್ಥಳಕ್ಕೆ ಪೋಲಿಸರು ಬಂದಿಲ್ಲ ಒಂದು ವೇಳೆ ಸ್ಥಳಕ್ಕೆ ಪೋಲಿಸರು ಬಂದಿದ್ದಲ್ಲಿ ನಾನು ಅದೆ ದಿನ ದೂರು ನೀಡುತ್ತಿದ್ದೇ ಎಂದರೆ ಸರಿಯಲ್ಲ. ದೂರನ್ನು ನಾನೇ ಬರೆದಿರುವುದಿಲ್ಲ. ಮನೆ ಕಟ್ಟುವ ಸಲುವಾಗಿ ಪ್ಯಾಸೇಜ್ ಬಿಟ್ಟ ಬಗ್ಗೆ ಯಾವುದೇ ದಾಖಲೆಗಳು ಇಲ್ಲ  ಮತ್ತು ಆರೋಪಿತರು ನೀಡಿರುವ ದೂರಿಗೆ ಪ್ರತಿಯಾಗಿ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಘಟನೆಯನ್ನು ಕಣ್ಣಾರೆ ನೋಡದೆ ಇರುವ ಕಾರಣ ಯಾರೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಮತ್ತು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಗೊತ್ತಿಲ್ಲವೆಂದರೆ ಸರಿ. ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಕೊಲೆ ಬೆದರಿಗೆ ಹಾಕಿಲ್ಲ ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಆರೋಪಿತರು

ನೀಡಿರುವ ದೂರಿನ ಪ್ರತಿಯಾಗಿ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.